## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 51 (ನಗರಾಭಿವೃದ್ಧಿ ಇಲಾಖೆಯಿಂದ ವರ್ಗಾಯಿತ) |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 16-09-2021. |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಪ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಸಿಲ್ಕ್ ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲು ರಸ್ತೆಯ ಪಿಲ್ಲರ್ ಸಂಖ್ಯೆ 20-21 ರ ನಡುವಿನ ರಸ್ತೆ ವಿಭಜಕಗಳನ್ನು ತೆರವುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: ಈ ರಸ್ತೆ ವಿಭಜಕಗಳನ್ನು ತೆರವುಗೊಳಿಸಲು ಬಿ.ಬಿ.ಎಂ.ಪಿ. ಯಿಂದ ಅನುಮತಿ ಪಡೆಯಲಾಗಿದೆಯೇ; ಇಲ್ಲವೆಂದಾದಲ್ಲಿ ವಿಭಜಕಗಳನ್ನು ತೆರವುಗೊಳಿಸಿದವರು ಯಾರು ಮತ್ತು ಯಾವ ಕಾರಣಕ್ಕೆ ತೆರವುಗೊಳಿಸಲಾಗಿದೆ: ಈಗಾಗಲೇ ತೆರವುಗೊಂಡಿರುವ ರಸ್ತೆ ವಿಭಜಕಗಳನ್ನು ಪುನಃ ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಸಿಲ್ಕ್ ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲು ರಸ್ತೆಯು ರಾಷ್ಟ್ರೀಯ ಹೆದ್ದಾರಿ-7 ಆಗಿದ್ದು, ಸದರಿ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದಲ್ಲಿದೆ. (ಎನ್.ಹೆಚ್.ಎ.ಐ) ಮೇಲು ಸೇತುವೆಯನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿದ್ದು, ಸದರಿ ಮೇಲು ಸೇತುವೆ ಹಾಗೂ ರಾಷ್ಟ್ರೀಯ ಹೆದ್ದಾರಿ-7 ರಸ್ತೆಯು ಎನ್.ಹೆಚ್.ಎ.ಐ. ಅವರ ನಿರ್ವಹಣೆಯಲ್ಲೇ ಇರುತ್ತದೆ. ತತ್ಸಂಬಂಧ ಎನ್.ಹೆಚ್.ಎ.ಐ. ಅವರಿಂದ ಪಿಲ್ಲರ್ ಸಂಖ್ಯೆ 20-21 ರ ನಡುವಿನ ರಸ್ತೆ ವಿಭಜಕಗಳನ್ನು ತೆರವುಗೊಳಿಸಿರುವುದರ ಬಗ್ಗೆ ಸದರಿಯವರು ದಿನಾಂಕ:16.09.2021 ರಂದು ಈ ಕೆಳಗಿನಂತೆ ವರದಿಯನ್ನು ನೀಡಿರುತ್ತಾರೆ.<br>➤ ಜನ ಪ್ರತಿನಿಧಿಗಳು, ಪೋಲೀಸ್ ಹಾಗೂ ಸಾರ್ವಜನಿಕರಿಂದ ಮಂಗಮ್ಮನಪಾಳ್ಯದಿಂದ ಎದುರು ಬರುವ ವಾಹನ ಚಾಲನೆಯನ್ನು ತಡೆಯಲು ಈ ಸ್ಥಳದಲ್ಲಿ ರಸ್ತೆ ವಿಭಜಕಗಳನ್ನು ತೆರವುಗೊಳಿಸಲು ಒತ್ತಡ ಹೇರಿದ್ದುದರಿಂದ ಪೋಲೀಸ್ ಇಲಾಖೆಯವರಿಂದಲೇ ಕ್ರಮ ಕೈಗೊಳ್ಳಲಾಗಿರುತ್ತದೆ. ಈ ನಿಟ್ಟಿನಲ್ಲಿ ಪೋಲೀಸ್ ಇಲಾಖೆಯಿಂದ ಸ್ವೀಕರಿಸಿದ ಪತ್ರದಲ್ಲಿ ಈ ಕೆಳಗಿನಂತೆ ತಿಳಿಸಲಾಗಿದೆ. (ಪ್ರತಿ ಅನುಬಂಧದಲ್ಲಿರಿಸಿದೆ).<br>• ದಿನಾಂಕ: 19.07.2019ರಂದು ಮಡಿವಾಳ ಸಂಚಾರಿ ಪೋಲೀಸ್ ಸ್ಟೇಷನ್ ಇನ್ಸ್‌ಪೆಕ್ಟರ್ ರವರಿಂದ ಸ್ವೀಕೃತಗೊಂಡ ಪತ್ರದಲ್ಲಿ ಪಿಲ್ಲರ್ ಸಂಖ್ಯೆ 21ರ ಬಳಿ ದಿನಾಂಕ:15.07.2019 ರಿಂದ ಸೆಂಟರ್ ಮೀಡಿಯನ್ ತೆರವುಗೊಳಿಸಿ ವಾಹನಗಳು ಯೂ ತಿರುವು ಪಡೆಯಲು ಅವಕಾಶ ಮಾಡಿಕೊಡಲಾಗಿರುವ ಬಗ್ಗೆ ತಿಳಿಸಿರುತ್ತಾರೆ.<br>• ಸದರಿ ರಸ್ತೆಯು ಎನ್.ಹೆಚ್.ಎ.ಐ. ಅವರ ಮೂಲಕ ಬಿ.ಓ.ಟಿ. ಮಾಡೆಲ್‌ನಲ್ಲಿ ನಿರ್ಮಿತಗೊಂಡಿದ್ದು, ಇದರ ನಿರ್ವಹಣೆಯನ್ನು ಮೆ:ಬಿ.ಇ.ಟಿ.ಎಲ್. ಸಂಸ್ಥೆಯ ವತಿಯಿಂದಲೇ ನಿರ್ವಹಿಸಲಾಗುತ್ತಿದೆ.<br>• ಸದರಿ ರಸ್ತೆಯು ಎನ್.ಹೆಚ್.ಎ.ಐ. ಮತ್ತು ಭಾರತ ಸರ್ಕಾರದ ಸುಪರ್ದಿಯಲ್ಲಿರುವುದರಿಂದ ಸ್ಥಳೀಯ ಪೋಲೀಸ್ ಇಲಾಖೆ, ಜನ ಪ್ರತಿನಿಧಿಗಳು ಹಾಗೂ ಸಾರ್ವಜನಿಕರನ್ನು ಗಮನದಲ್ಲಿರಿಸಿಕೊಂಡು ಈ ಕ್ರಮವನ್ನು ಕೈಗೊಳ್ಳಲಾಗಿದೆ. |
| ಆ) | ಸಿಲ್ಕ್ ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲು ರಸ್ತೆಯ ಪಿಲ್ಲರ್ ಸಂಖ್ಯೆ 20-21 ರ ನಡುವಿನ ರಸ್ತೆ ವಿಭಜಕಗಳನ್ನು ತೆರವುಗೊಳಿಸಿರುವುದು ಅನಧಿಕೃತವೆಂದಾದಲ್ಲಿ ಸಾರ್ವಜನಿಕ ಆಸ್ತಿಯನ್ನು ಹಾಳುಗೆಡವಿದ ಬಗ್ಗೆ ಕ್ರಿಮಿನಲ್ ಕೇಸ್ ದಾಖಲಾಗಿದೆಯೇ; ಇಲ್ಲವೆಂದಾದಲ್ಲಿ ದಾಖಲಿಸದಿರಲು ಕಾರಣವೇನು; | |
| ಇ) | ಸಿಲ್ಕ್ ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲು ರಸ್ತೆಯ ಪಿಲ್ಲರ್ ಸಂಖ್ಯೆ 20-21 ನಡುವಿನ ರಸ್ತೆ ವಿಭಜಕಗಳನ್ನು ತೆರವುಗೊಳಿಸಲು ಸರ್ಕಾರ ಆದೇಶ ಹೊರಡಿಸಿದೆಯೇ; (ಆದೇಶದ ಪ್ರತಿಯನ್ನು ಒದಗಿಸುವುದು) ಇಲ್ಲವೆಂದಾದಲ್ಲಿ ಈ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಕೈಗೊಂಡಿರುವ ಕ್ರಮವೇನು? (ಮಾಹಿತಿ ನೀಡುವುದು) | |

ಲೋಇ 220 ಸಿಎನ್‌ಹೆಚ್ 2021 (ಇ)

(ಸಿ.ಸಿ.ಪಾಟೀಲ)
ಲೋಕೋಪಯೋಗಿ ಸಚಿವರು

LCQ No. 59 [illegible]

ನಂ .ಸಿ. ೧೩/ಮ.ಸು.ಸೊ.ಠಾಣೆ/2019

ಮಡಿವಾಳ ಸಂಚಾರ ಪೊಲೀಸ್ ಠಾಣೆ,
ಬೆಂಗಳೂರು ನಗರ. ದಿನಾಂಕ:-19/07/2019

ರವರಿಗೆ,

ಮಾನ್ಯ ನಿರ್ದೇಶಕರು,
ಬಿ.ಇ.ಟಿ.ಪಿ.ಎಲ್,
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.

ಮಾನ್ಯರೇ,

ವಿಷಯ:-ಹೊಸೂರು ಮುಖ್ಯರಸ್ತೆಯ ಪಿಲ್ಲರ್ ನಂಬರ್ 21 ರ ಬಳಿ ರಸ್ತೆಯ ಎರಡು ಬದಿ ವೈಜ್ಞಾನಿಕ ರಸ್ತೆ ಉಬ್ಬರವನ್ನು ನಿರ್ಮಾಣ ಮಾಡುವ ಬಗ್ಗೆ.

~*~*~*~*~

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ತಮ್ಮಲ್ಲಿ ತಿಳಿಯಪಡಿಸುವುದೇನೆಂದರೆ, ಸರಹದ್ದಿನ ಹೋಸೂರು ರಸ್ತೆಯಲ್ಲಿ ಮಂಗಮ್ಮನಪಾಳ್ಯ ಜಂಕ್ಷನ್‌ನಿಂದ ಬೊಮ್ಮನಹಳ್ಳಿ ಜಂಕ್ಷನ್ ಕಡೆಗೆ ವಿರುದ್ಧ ದಿಕ್ಕಿನಲ್ಲಿ ಸಂಚರಿಸುತ್ತಿದ್ದ ವಾಹನಗಳಿಂದ ಉಂಟಾಗುತ್ತಿದ್ದ ಸಂಚಾರ ಅಡಚಣೆಯನ್ನು ನಿಯಂತ್ರಣ ಮಾಡುವ ಸಲುವಾಗಿ ಮಂಗಮ್ಮನಪಾಳ್ಯ ಜಂಕ್ಷನ್ ಬಳಿ ಬ್ಯಾರಿಕೇಡ್‌ಗಳನ್ನ ಅಳವಡಿಸಿ ವಾಹನ ಚಾಲಕ ಸವಾರು ಸಂಚರಿಸಿದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ ಮತ್ತು ವಿರುದ್ಧ ದಿಕ್ಕಿನಲ್ಲಿ ಸಂಚರಿಸುತ್ತಿದ್ದ ವಾಹನ ಚಾಲಕ ಸವಾರರು ಬೊಮ್ಮನಹಳ್ಳಿ-ಬೇಗೂರು ರಸ್ತೆ ಕಡೆಗೆ ಸಂಚರಿಸಲು ಅನುಕೂಲವಾಗುವಂತೆ ಹೊಸೂರು ಮುಖ್ಯರಸ್ತೆಯ ಪಿಲ್ಲರ್ ನಂಬರ್-21 ರ ಬಳಿ ದಿನಾಂಕ:-15/07/2019 ರಿಂದ ಸೆಂಟರ್ ಮೀಡಿಯನ್ ತೆರುವುಗೊಳಿಸಿ ವಾಹನಗಳು "ಯೂ" ತಿರುವು ಪಡೆಯಲು ಅವಕಾಶ ಮಾಡಿಕೊಡಲಾಗಿರುತ್ತದೆ.

ಆದರೆ ಹೊಸೂರು ಮುಖ್ಯರಸ್ತೆಯಲ್ಲಿ ವಾಹನಗಳು ವೇಗವಾಗಿ ಸಂಚರಿಸುವುದರಿಂದ "ಯೂ" ತಿರುವು ಪಡೆಯುವ ವಾಹನಗಳಿಗೆ ಅಡಚಣೆಯಾಗುವುದು ಹಾಗೂ ಅಪಘಾತಗಳು ನಡೆಯುವ ಸಂಭವವು ಹೆಚ್ಚಾಗಿರುವುದರಿಂದ ವಾಹನ ಚಾಲಕ/ಸವಾರರ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಮತ್ತು ಅಪಘಾತಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಸದರಿ ಸ್ಥಳದಲ್ಲಿ ವೈಜ್ಞಾನಿಕ ರಸ್ತೆ ಉಬ್ಬರವನ್ನು ನಿರ್ಮಿಸುವುದು ಹೆಚ್ಚು ಅವಶ್ಯವಿದ್ದು, ಈ ಬಗ್ಗೆ ಬಿ.ಇ.ಟಿ.ಪಿ.ಎಲ್ ಸಂಸ್ಥೆಯ ಶ್ರೀ ಬಲದೇವ್ ಸಿಂಗ್ ರವರನ್ನು ಖುದ್ದು ಬೇಟಿ ಮಾಡಿ ರಸ್ತೆ ಉಬ್ಬರವನ್ನು ನಿರ್ಮಿಸಿಕೊಡುವಂತೆ ತಿಳಿಸಲಾಗಿರುತ್ತದೆ. ಮತ್ತು ಹಲವಾರು ಬಾರಿ ದೂರವಾಣಿ ಮುಖಾಂತರವೂ ಸಹ ತಿಳಿಸಲಾಗಿದ್ದರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ಆದ್ದರಿಂದ ಸಾರ್ವಜನಿಕ ಕಾಳಜಿ ದೃಷ್ಟಿಯಿಂದ ವಿಷಯವನ್ನು ಗಂಬೀರವಾಗಿ ಪರಿಗಣಿಸಿ ಕೂಡಲೇ ಈ ಬಗ್ಗೆ ಕ್ರಮಕೈಗೊಳ್ಳುವಂತೆ ಕೋರಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,
[signature]
ಪೊಲೀಸ್ ಇನ್ಸ್‌ಪೆಕ್ಟರ್
ಮಡಿವಾಳ ಸಂಚಾರ ಪೊಲೀಸ್ ಠಾಣೆ
ಬೆಂಗಳೂರು ನಗರ-68

ಪ್ರತಿಯನ್ನು ಮಾಹಿತಿಗಾಗಿ,
ಮಾನ್ಯ ಉಪ-ಪೊಲೀಸ್ ಆಯುಕ್ತರು, ಸಂಚಾರ ಪೂರ್ವ ವಿಭಾಗ, ಬೆಂಗಳೂರು ನಗರ ರವರಿಗೆ ಮಾಹಿತಿಗಾಗಿ.